


# ರಂಗ

ಗೀತಾ ಧರ್ಮರಾಜನ್
ಕಲೆ: ಶ್ರೀವಿ

I LOVE READING
KATHA

ರಂಗಾ ಮರಿ ಘೇಂಡಾಮೃಗವಾಗಿದ್ದು, ಕೆಸರಿನಲ್ಲಿ ಹೊರಳಾಡಲು ಮತ್ತು ತಾಯಿಯೊಂದಿಗೆ ಆಟವಾಡಲು ಇಷ್ಟಪಡುತ್ತಾಳೆ. ರಂಗಾಳ ಬಗ್ಗೆ, ಅವಳು ಎಲ್ಲಿ ವಾಸಿಸುತ್ತಾಳೆ ಮತ್ತು ಅವಳು ಮಾಡಬಹುದಾದ ಎಲ್ಲಾ ಚಟುವಟಿಕೆಗಳನ್ನು ಈ ಪುಸ್ತಕದಲ್ಲಿ ತಿಳಿದುಕೊಳ್ಳಿ!

KATHA

ಕಥಾ ಸಂಸ್ಥೆಯನ್ನು 1988 ರಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಬಡತನದ ಸವಾಲುಗಳನ್ನು ನಿಭಾಯಿಸಲು ಸ್ಥಾಪಿಸಲಾಯಿತು. ಕಥಾ ಮೂರು ಪ್ರಭಾವದ ಕೇಂದ್ರಗಳನ್ನು ಹೊಂದಿದೆ - ಕಥೆ ಸಂಶೋಧನೆ ಮತ್ತು ಸಂಪನ್ಮೂಲ ಕೇಂದ್ರ (ಕಥಾ ವಿಲಾಸಂ), ಸುಸ್ಥಿರ ಕಲಿಕೆಯ ಕೇಂದ್ರ (ಕಲ್ಪವೃಕ್ಷಂ) ಮತ್ತು ಕಥಾ ಆದಿವಾಸಿ ಮತ್ತು ದಲಿತ ಲರ್ನಿಂಗ್ ಲ್ಯಾಬ್ (KADL) ನಾವೀನ್ಯತೆ ಕೇಂದ್ರ. ಕಥಾ ಅವರ 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್ ಈ ಮೂರು ಕೇಂದ್ರಗಳ ಬಲವನ್ನು ಸಹಯೋಗದೊಂದಿಗೆ, ಸಮರ್ಥನೀಯವಾಗಿ ಮತ್ತು ವಿಶ್ವದ ಅತಿದೊಡ್ಡ ಯುವ ಜನಸಂಖ್ಯೆಯ ಜೀವನದ ಮೇಲೆ ಪ್ರಭಾವ ಬೀರಲು ಸಂಯೋಜಿಸುತ್ತದೆ.

"ಇದು ಭಾರತದ ಕಿರೀಟದಲ್ಲಿ ಒಂದು ಶೈಕ್ಷಣಿಕ ಆಭರಣ." - ನೌಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕ, ಅಂತಾರಾಷ್ಟ್ರೀಯ ಹಣಕಾಸು ನಿಧಿ

"[ಕಥಾ]...ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ವಿಶೇಷ ಮತ್ತು ಅನನ್ಯ ಕ್ಷಣ." - ಎಕನಾಮಿಕ್ ಟೈಮ್ಸ್


“ಕಥಾ ಸಂಸ್ಥೆಯು ಮಕ್ಕಳಿಗಾಗಿ ನಿಜವಾದ ವಾತ್ಸಲ್ಯವನ್ನು ಹೊಂದಿದೆ. ಅದಕ್ಕಾಗಿಯೇ ... ಮಕ್ಕಳಿಗಾಗಿ ಅಂತಹ ಬಹುಕಾಂತೀಯ ಚಿತ್ರ ಪುಸ್ತಕಗಳನ್ನು ರಚಿಸಿದೆ. - ಟೈಮ್ ಔಟ್

"ಕಥಾ ಸಂಸ್ಥೆಯ ಕೆಲಸವು, ಮಕ್ಕಳು [ಅವರ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಿಗೆ ಸಮರ್ಥನೀಯ ಮತ್ತು ನೈಜವಾದ ಬದಲಾವಣೆಯನ್ನು ತರಬಹುದು ಎಂಬ ಉದ್ದೇಶದಿಂದ ನಡೆಸಲ್ಪಡುತ್ತದೆ." - ಪೇಪರ್ಟೈಗರ್ಸ್

# ರಂಗ

ಗೀತಾ ಧರ್ಮರಾಜನ್

ಕಲೆ: ಶ್ರೀವಿ



KATHA

ದೆಹಲಿ | ಚೆನ್ನೈ | ಬೆಂಗಳೂರು






ಪ್ರಾಣಿ ಪುಟಾಣಿಗಳು
ಇವುಗಳಲ್ಲಿ ನೀವು
ಎಷ್ಟು ಹೆಸರಿಸಬಹುದು













"ನಾನು ರಂಗಾ,
ಮರಿ ಘೇಂಡಾಮೃಗ"

ನಾನು ತುಂಬಾ, ತುಂಬಾ ಸಣ್ಣವನು.

ಆದರೆ ಅಮ್ಮ ತುಂಬಾ,

# ತುಂಬಾ ದೊಡ್ಡವರು!





ಇವರೆಲ್ಲ ನನ್ನ ಮಿತ್ರರು.

ನಾವು ಇರುವುದು ಕಾಝೀರಂಗಾದಲ್ಲಿ!

# ನಾವು ಘೇಂಡಾಮೃಗಗಳು!

1. ಘೇಂಡಾಮೃಗಗಳಿಗೆ ಇಂಗ್ಲಿಷಿನಲ್ಲಿ ರೈನೋಸರಸ್ ಎನ್ನುತ್ತಾರೆ. ರೈನೋ ಅಂದರೆ ಮೂಗು, ಸರಸ್ ಅಂದರೆ ಕೊಂಬು.
2. ಘೇಂಡಾಮೃಗಗಳು ಭೂಮಿಯ ಮೇಲೆ ಲಕ್ಷಾಂತರ ವರ್ಷಗಳಿಂದ ವಾಸಿಸುತ್ತಿವೆ. ಒಂದು ಕಾಲದಲ್ಲಿ ಸುಮಾರು 10,00,000 ಘೇಂಡಾಮೃಗಗಳು ಇದ್ದವು. ಈಗ, ನಾವು ಪ್ರಪಂಚದಾದ್ಯಂತ ಕೇವಲ 25,000ದಷ್ಟಿದ್ದೇವೆ. ಭಾರತದಲ್ಲಿರುವ ಘೇಂಡಾಗಳ ಸಂಖ್ಯೆ ಸುಮಾರು 3,000.
3. ನಮ್ಮ ಬೂದು-ಕಂದು ಬೃಹತ್ ಗಾತ್ರವನ್ನು ನೀವು ತಪ್ಪಿಸಿಕೊಳ್ಳುವಂತೆಯೇ ಇಲ್ಲ! ದಪ್ಪ ಚರ್ಮದ, ಒಂಟಿ ಕೊಂಬಿನ ದೈತ್ಯರು ನಾವು, ಇಡೀ ಭೂಮಿಯಲ್ಲಿ ಯಾರಿಗೂ ಹೆದರುವುದಿಲ್ಲ - ಮನುಷ್ಯರನ್ನು ಬಿಟ್ಟು!
4. ಗುಟುರು ಹಾಕಲು, ಜೋರಾಗಿ ಕೂಗಲು, ಅರಚಲು, ಗರ್ಜಿಸಲು, ಕೀಚಲು ಧ್ವನಿಯಲ್ಲಿ ಮೇಲುಸಿರು ಬಿಡಲು, ಗುರುಗುಟ್ಟಲು, ಚೀತ್ಕರಿಸಲು, ಸಂಕಟ ಧ್ವನಿ ಹೊರಡಿಸಲು, ಗುಡುಗುಟ್ಟಲು ಮತ್ತು ಹಮ್ ಎನ್ನಲು ನಿಮಗೆ ಸಾಧ್ಯವೇ? ಘೇಂಡಾಗಳಿಗೆ ಸಾಧ್ಯ!
5. ನಾವು ತುಂಬಾ ಮಾತಾಡುತ್ತೇವೆ! ಬೇರೆ ಘೇಂಡಾಗಳ ಜೊತೆಗೆ ಮಾತಾಡಲು ನಾವು ನಮ್ಮ ಮಲವನ್ನೂ ಬಳಸುತ್ತೇವೆ!
6. ನಾವು ಹುಲ್ಲು ಮತ್ತು ಎಲೆಗಳನ್ನು ಮಾತ್ರ ತಿನ್ನುತ್ತೇವೆ. ಉದ್ದನೆಯ ಹುಲ್ಲು ಮತ್ತು ಎಲೆಗಳನ್ನು ಸಂಗ್ರಹಿಸಲು ನಾವು ನಮ್ಮ ಮೇಲಿನ ತುಟಿಯನ್ನು ಬಳಸುತ್ತೇವೆ. ಚಿಕ್ಕ ಹುಲ್ಲನ್ನು ತಿನ್ನುವಾಗ ನಾವು ತುಟಿಯ ತುದಿಯನ್ನು ಒಳಕ್ಕೆಳೆದುಕೊಳ್ಳುತ್ತೇವೆ.
7. ಮಣ್ಣಿನಲ್ಲಿ ಅಥವಾ ನೀರಿನಲ್ಲಿ ಹೊರಳಾಡುವುದು ನಮಗೆ ಇಷ್ಟ! ಏಕೆಂದರೆ ನಿಮ್ಮಂತೆ ನಮ್ಮಲ್ಲಿ ಬೆವರು ಗ್ರಂಥಿಗಳು ಇಲ್ಲದಿರುವುದರಿಂದ ಇದು ನಮ್ಮನ್ನು ತಂಪಾಗಿರಿಸುತ್ತದೆ. ಕಿರಿಕಿರಿಮಾಡುವ ಸೊಳ್ಳೆಗಳು ಮತ್ತು ನೊಣಗಳಿಂದಲೂ ಮಣ್ಣು ನಮ್ಮನ್ನು ರಕ್ಷಿಸುತ್ತದೆ.
8. ನಮಗೆ ಬೆಳ್ಳಕ್ಕಿಗಳು ಮತ್ತು ಮೈನಾಗಳಂತಹ ಅನೇಕ ಮಿತ್ರರಿದ್ದಾರೆ, ಅವರು ನಮ್ಮ ಚರ್ಮದ ಮಡಿಕೆಗಳ ನಡುವೆ ಅಡಗಿರುವ ಉಣ್ಣೆ ಹುಳುಗಳನ್ನು ನಿವಾರಿಸಲು ಸಹಾಯ ಮಾಡುತ್ತಾರೆ.
9. ತಾಯಿ ಮಕ್ಕಳನ್ನು ಹೊರತುಪಡಿಸಿ ನಾವು ಘೇಂಡಾಗಳು ಒಬ್ಬರೇ ವಾಸಿಸುವುದನ್ನು ಇಷ್ಟಪಡುತ್ತೇವೆ.
10. ನಾವು ಉತ್ತಮ ಈಜುಗಾರರು! ಖಾಜಿರಂಗಾಕ್ಕೆ ಬಂದು ನಮ್ಮನ್ನು ನೋಡಿ. ನಾವು ಅದನ್ನು ಇಷ್ಟಪಡುತ್ತೇವೆ :)



ಗೀತಾ ಧರ್ಮರಾಜನ್ ಮಕ್ಕಳಿಗೆ ಬರೆಯುವುದನ್ನು ಇಷ್ಟಪಡುತ್ತಾರೆ. ಸಾಹಿತ್ಯ ಮತ್ತು ಶಿಕ್ಷಣದಲ್ಲಿ ಮಾಡಿದ ಕೆಲಸಕ್ಕಾಗಿ ಅವರು 2012ರಲ್ಲಿ ಪದ್ಮಶ್ರೀ ಪಡೆದರು.

ಶ್ರೀವಿ ಕಲ್ಯಾಣ್ ಒಬ್ಬ ಶಿಕ್ಷಕಿ, ಲೇಖಕಿ, ವಿನ್ಯಾಸಕಿ, ಚಿತ್ರಕಾರರು ಮತ್ತು ಕಲಾವಿದೆ. ಮಕ್ಕಳು ಹಾಗೂ ದೊಡ್ಡವರ ಹಲವಾರು ಪುಸ್ತಕಗಳಿಗೆ ಅವರು ಲೇಖಕರಾಗಿ, ಸಹ-ಲೇಖಕರಾಗಿ ಮತ್ತು ಚಿತ್ರಕಾರರಾಗಿ ಕೆಲಸಮಾಡಿದ್ದಾರೆ.

ಕಥಾ ಪುಸ್ತಕ 'ರನ್ ರಂಗ ರನ್'ನಲ್ಲಿ ಈ ಕಥೆಯ ದೀರ್ಘ ರೂಪವನ್ನು ಓದಿ.

KATHA

ಈ ಆವೃತ್ತಿಯನ್ನು ಮೊದಲು 2024
ಕಾಪಿರೈಟ್ © ಕಥಾ, 2024
ಪಠ್ಯದ ಕಾಪಿರೈಟ್ © ಗೀತಾ ಧರ್ಮರಾಜನ್
ಚಿತ್ರಗಳ ಕಾಪಿರೈಟ್ © ಕಥಾ
ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಪೂರ್ವ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರು ಬಳಕೆ ಮಾಡುವಂತಿಲ್ಲ ಅಥವಾ ಬಳಸುವಂತಿಲ್ಲ.
ನವದೆಹಲಿಯಲ್ಲಿ ಮುದ್ರಿಸಲಾಗಿದೆ
ಐಎಸ್ ಬಿಎನ್ 978-93-94185-72-2

ನಮ್ಮ ಧ್ಯೇಯ: ಪ್ರತಿಯೊಂದು ಮಗುವೂ ಖುಷಿಗಾಗಿ ಮತ್ತು ಅರ್ಥಕ್ಕಾಗಿ ಓದಬೇಕು!
ಕಥಾ ಎಂಬುದು ಒಂದು ನೋಂದಾಯಿತ ಲಾಭ ರಹಿತ ಸಂಸ್ಥೆ. ಈ ಪುಸ್ತಕವು 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್‌ನ ಕೃತಿಯಾಗಿದೆ.
ಭಾರತದಲ್ಲಿ 300 ಮಿಲಿಯನ್ ಶಾಲೆಗೆ ಹೋಗುವ ಮಕ್ಕಳು ಹೊಸ ಕಲಿಕೆಯ ವಿಧಾನಗಳೊಂದಿಗೆ ಗ್ರೇಡ್ ಮಟ್ಟದ ಓದುವಿಕೆಯನ್ನು ಸಾಧಿಸಲು ನಾವು ಸಹಾಯ ಮಾಡುತ್ತೇವೆ.
ದೆಹಲಿ ವಿಳಾಸ: A3, ಸರ್ವೋದಯ ಎನ್ಕ್ಲೇವ್, ಶ್ರೀ ಅರಬಿಂದೋ ಮಾರ್ಗ, ನವದೆಹಲಿ 110 017
ಚೆನ್ನೈವಿಳಾಸ: 6, ಪಾಪನಾಸಂ ಶಿವನ್ ಸಲೈ, ಮೈಲಾಪುರ, ಚೆನ್ನೈ 600 004
ದೂರವಾಣಿ: ದೆಹಲಿ: +91 11 4182 9998 | ಚೆನ್ನೈ: +91 98400 30073
ಇಮೇಲ್: books@katha.org
ವೆಬ್‌ಸೈಟ್: www.katha.org | books.katha.org | learn.katha.org

ಈ ಪುಸ್ತಕದಿಂದ ಬರುವ ಲಾಭವು ಕಥಾ ಶಾಲೆಗಳಲ್ಲಿ ಕಲಿಯುವ ಮಕ್ಕಳ ಗುಣಮಟ್ಟದ ಶಿಕ್ಷಣವನ್ನು ಬೆಂಬಲಿಸುತ್ತದೆ.

ನಮ್ಮ ಪುಸ್ತಕಗಳನ್ನು ಮುದ್ರಿಸಿದ ಕಾಗದವನ್ನು ತಯಾರಿಸಲು ಬಳಸುವ ಮರವನ್ನು ಬದಲಿಸಲು ಕಥಾ ನಿಯಮಿತವಾಗಿ ಮರಗಳನ್ನು ನೆಡುತ್ತದೆ






ಈ ವಿಶಿಷ್ಟ ಸರಣಿ ಮೊದಲ ತಲೆಮಾರಿನ ಓದುಗರನ್ನು ಮನರಂಜನೆ ಮತ್ತು ಅರ್ಥಪೂರ್ಣ ಓದಿನ ಲೋಕಕ್ಕೆ ಸೆಳೆಯುತ್ತದೆ. ಈ ಸರಣಿಯ ಪುಸ್ತಕಗಳು, ತಮ್ಮ ಉನ್ನತ ಗುಣಮಟ್ಟದ ವಿಷಯವಸ್ತು, ಮತ್ತು ವಿನ್ಯಾಸವು ಈ ಮಕ್ಕಳ ಕಲಿಕೆ ಅವಶ್ಯಕತೆಗಳಿಗೆ ತಕ್ಕಂತೆ ಇದೆ . ಹಂಚಿಕೊಂಡ ಮತ್ತುಮಾರ್ಗದರ್ಶಿತ ಓದುವಿಕೆಯ ಮೂಲಕ ಭಾರತದ 2000 ವರ್ಷಗಳ ಸಾಹಿತ್ಯ ಪರಂಪರೆಯನ್ನು, ಶ್ರೇಷ್ಠತೆಯಿಂದ ಆಧುನಿಕತೆಯವರೆಗೆ ಕಥಾ ಒದಗಿಸುತ್ತದೆ. ಇದರೊಂದಿಗೆ, ಕೈಗೆಟುಕುವ ಬೆಲೆಯಲ್ಲಿ ತಲುಪದ ಮಗುವನ್ನು ತಲುಪಲು - ಓದುವಿಕೆ ಮತ್ತು ಶಿಕ್ಷಣವನ್ನು ಪ್ರಜಾಪ್ರಭುತ್ವಗೊಳಿಸುವ ಕಥಾ ಮಾರ್ಗ!

ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು

ಸಂತೋಷ ಮತ್ತು ಆಶ್ಚರ್ಯಕ್ಕಾಗಿ ಓದಿ






























Read 108 inspiring stories FREE at learn.katha.org

FOR OUR BOOKS

www.books.katha.org

www.books.katha.org

ಮಕ್ಕಳಿಗಾಗಿ
ಒಂದು ಕಥಾ ಪುಸ್ತಕ
ISBN 978-93-94185-72-2
9 789394 185722
books.katha.org
₹ 120/-

ನೀಲಿ ಸರಣಿಯಲ್ಲಿ

ಕಥಾದಿಂದ ಒಂದು 300ಎಂ ಥಿಂಕ್‌ಬುಕ್